# 3. ಶುಕನಾಸನ ಉಪದೇಶ

**ವಿದ್ಯಾವಾಚಸ್ಪತಿ ಡಾ.ಬನ್ನಂಜೆ ಗೋವಿಂದಾಚಾರ್ಯ**

## ಕವಿ – ಕಾವ್ಯ– ಪರಿಚಯ



ಡಾ. ಬನ್ನಂಜೆ ಗೋವಿಂದಾಚಾರ್ಯ

ಡಾ.ಬನ್ನಂಜೆ ಗೋವಿಂದಾಚಾರ್ಯರು **1936ರ ಆಗಸ್ಟ್ 3ರಂದು ಉಡುಪಿ** ಯಲ್ಲಿ ಜನಿಸಿದರು. ವಿದ್ಯಾವಾಚಸ್ಪತಿ ಎಂಬುದು ಅವರ ಪಾಂಡಿತ್ಯಕ್ಕೆ ಸಂದ ಬಿರುದು.

ಇವರು **ಕಾದಂಬರಿ, ಭಗವಂತನ ನಲ್ನುಡಿ, ಮುಗಿಲ ಮಾತು, ಹೇಳದೆ ಉಳಿದದ್ದು, ನೆನಪಾದಳು ಶಕುಂತಲೆ, ಮತ್ತೆ ರಾಮನ ಕತೆ, ಮಹಾಶ್ವೇತೆ, ಆವೆಯ ಮಣ್ಣಿನ ಆಟದ ಬಂಡಿ, ಋತುಗಳ ಹೆಣಿಗೆ** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಗಳು** ಸಂದಿವೆ. ಅಖಿಲ ಭಾರತ ಸಂಸ್ಕೃತ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## ಕತೆಯ ಹಿನ್ನೆಲೆ

ಸಾ.ಶ. 6ನೆಯ ಶತಮಾನದಲ್ಲಿ ಕನೌಜಿನ ಮಹಾರಾಜ ಹರ್ಷವರ್ಧನನ ಆಸ್ಥಾನ ಕವಿಯಾಗಿದ್ದ ಬಾಣಭಟ್ಟನ ಸಂಸ್ಕೃತ ಗದ್ಯ ಮಹಾಕಾವ್ಯ **'ಕಾದಂಬರಿ'** ಇದರಲ್ಲಿ ಬರುವ **'ಶುಕನಾಸೋಪದೇಶ'** ಮನುಷ್ಯರೆಲ್ಲರೂ ಪರಿಪಾಲಿಸಲೇಬೇಕಾದ ನೀತಿಸಂಹಿತೆಗಳ ಅಮೂಲ್ಯವಾದ ಭಂಡಾರ. ಕಾಶ್ಮೀರದ ಮಹಾರಾಜ ತಾರಾಪೀಡನ ಮಹಾಮಂತ್ರಿ ಶುಕನಾಸ. ಆತ ಮಹಾಪ್ರಾಜ್ಞ, ವಿವೇಕಿ, ಸಮರ್ಥ ಆಡಳಿತಗಾರ, ರಾಜತಂತ್ರ ನಿಪುಣ, ಮುತ್ಸದ್ದಿ. ರಾಜಪುತ್ರ ಚಂದ್ರಾಪೀಡನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಬೇಕೆಂದು ತಾರಾಪೀಡನು ಸಂಕಲ್ಪಿಸುತ್ತಾನೆ. ಅಂತೆಯೇ ಸಕಲ ಸಿದ್ಧತೆಗಳನ್ನೂ ಮಾಡುತ್ತಾನೆ. ಈ ಪಟ್ಟಾಭಿಷೇಕೋತ್ಸವಕ್ಕೆ ಪೂರ್ವಭಾವಿಯಾಗಿ ಮಹಾಮಂತ್ರಿಯಾದ ಶುಕನಾಸನನ್ನು ಸಂದರ್ಶಿಸಲು ಚಂದ್ರಾಪೀಡನು ಬರುತ್ತಾನೆ. ಆಗ ಓರ್ವ ಜವಾಬ್ದಾರಿಯುತ ಪ್ರಧಾನಮಂತ್ರಿಯಾಗಿ ಮುಂದಕ್ಕೆ ಯುವರಾಜ ಪಟ್ಟವೇರಲಿರುವ ರಾಜಕುಮಾರನಿಗೆ ಅತ್ಯಂತ ಪ್ರಾಯೋಗಿಕವಾದ, ಅನುಭವಗಮ್ಯವಾದ ಉಪದೇಶಗಳನ್ನು ಶುಕನಾಸನು ನೀಡುತ್ತಾನೆ. ಕಾವ್ಯದಲ್ಲಿ ಬರುವ ಈ ಭಾಗವು **'ಶುಕನಾಸೋಪದೇಶ'** ಎಂದೇ ಪ್ರಸಿದ್ಧವಾಗಿದೆ.

## ಪಾಠದ ಒಳನೋಟ ಮತ್ತು ಆಶಯ

ಯುವರಾಜನ ಪಟ್ಟಕ್ಕೇರುತ್ತಿರುವ ಓರ್ವ ರಾಜಕುಮಾರನಿಗೆ ಹಿರಿಯ ಮಂತ್ರಿ ಶುಕನಾಸನು, ಐಶ್ವರ್ಯದ ಕುರಿತು ಮಾರ್ಮಿಕವಾಗಿ ಉಪದೇಶವನ್ನು ನೀಡುವುದು ಈ ಗದ್ಯಪಾಠದಲ್ಲಿ ಮೂಡಿಬಂದಿದೆ.

ಹಣವು ಅನರ್ಥಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಹಲವು ಮಹಾತ್ಮರು ಹೇಳಿದ್ದಾರೆ. ಅದು ಯಾರ ಬಳಿಯಾದರೂ ಸಂಚಯವಾದಾಗ ಅವರಿಗೊಂದು ಹುಸಿ ಹಮ್ಮು ಆವರಿಸಿಕೊಳ್ಳುತ್ತದೆ. ದುಡ್ಡಿನಿಂದ ಏನನ್ನು ಬೇಕಾದರೂ ಕೊಳ್ಳಬಲ್ಲೆ, ಯಾರನ್ನಾದರೂ ತನ್ನ ಅಡಿಯಾಳಾಗಿಸಬಲ್ಲೆ, ಹೇಗೆ ಬೇಕಾದರೂ ಬದುಕಬಲ್ಲೆ ಎಂಬ ಅಹಂಕಾರ ಹುಟ್ಟುತ್ತದಲ್ಲ; ಅದು ಅನರ್ಥಗಳನ್ನು ಸೃಷ್ಟಿಸುತ್ತದೆ. ದುಡ್ಡಿನಿಂದಾಗಿ ಮದ, ದರ್ಪ, ಅಹಂಕಾರ ಮನೆಮಾಡುತ್ತದೆ. ತಾನು ಯಾರಿಗೂ ತಲೆಬಾಗಬೇಕಿಲ್ಲ ಎಂಬ ಭಾವನೆ ಆವರಿಸಿಕೊಳ್ಳುತ್ತದೆ. ಆದ್ದರಿಂದ ರಾಜ್ಯದ ಎಲ್ಲ ಸಂಪತ್ತಿನ ಒಡೆಯನಾಗಿರುವ ಅರಸನಾಗಲು ಹೊರಟವನಿಗೆ ಈ ಯಾವ ಮತ್ತು(ಅಮಲು) ತಲೆಗಡರದಂತೆ ಹಿರಿಯರು ಉಪದೇಶಿಸಬೇಕು. ಆತನಿಗೆ ವಿವೇಕದ ಮಾತುಗಳನ್ನು ಹೇಳಬೇಕು. ಸಂಪತ್ತು, ದುಡ್ಡು, ಅಧಿಕಾರ, ಭೂಮಿಯ ಒಡೆತನ – ಇವೆಲ್ಲ ಯಾವುದೂ ತನ್ನದಲ್ಲ; ತಾನು ಅಲ್ಲಿ ಅವೆಲ್ಲದರ ಮೇಲ್ವಿಚಾರಕನಾಗಿ ಕೂತಿದ್ದೇನಷ್ಟೆ ಎಂಬ ವಿವೇಕ ಅರಸನಿಗಿರಬೇಕು. ಖಜಾನೆಯಲ್ಲಿರುವ ಸಂಪತ್ತೆಲ್ಲವೂ ಜನತೆಯದ್ದು. ತಾನು ಅದರ ಮೇಲ್ವಿಚಾರಣೆ ಹೊತ್ತ ಕೋಶಾಧಿಕಾರಿ ಮಾತ್ರ ಎಂದು ಅರಸನು ವಿನೀತನಾಗಿ ಭಾವಿಸಬೇಕು. ಹಾಗೆ ಆತನಿಗೆ ಬುದ್ಧಿವಾದ ಹೇಳುವ ಹಿರಿಯ ಮಂತ್ರಿಗಳು ಅರಮನೆಯಲ್ಲಿರಬೇಕು ಎಂಬ ಆಶಯ ಭಾವವನ್ನು ಹೊಂದಿದೆ.

## ಪಾಠದ ಸಂಕ್ಷಿಪ್ತ ವಿವರಣೆ

### ಗುರುವಾಣಿ

ಗುರುವಾಣಿ ಎಷ್ಟು ಪರಿಶುದ್ಧವಾದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ಆದರೆ ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಲಕ್ಷಣವಾದ ಮುಖದಲ್ಲಿ ಇನ್ನಷ್ಟು ಶ್ರೀಮಂತವಾಗುತ್ತದೆ. **ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಮನಸ್ಸಿನ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ.** ಆಗ ಬಾಳಿನಲ್ಲಿ ಒಂದು ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ.

### ಗುರೂಪದೇಶ

ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'(ಸ್ನಾನ), ತಲೆ ನೆರೆಯದೆ(ವಯಸ್ಸಾಗದೆ) ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು(ದೀವಟಿಗೆ) ಇಲ್ಲದೆ ಬೆಳಗುವ ಬೆಳಕು; ಉದ್ವೇಗ(ಆವೇಶ) ಬರಿಸದ ಜಾಗರಣೆ(ಸಂಕೀರ್ತನೆ).

### ಗುರೂಪದೇಶ ಮತ್ತು ರಾಜಮನೆತನ

**ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ.** ಯಾರದೋ ದಾಕ್ಷಿಣ್ಯಕ್ಕೆ(ಅನುಕಂಪಕ್ಕೆ) ಉಪದೇಶವನ್ನು ಆಲಿಸಿದರೂ ಎಂಥ ಅನಾದರ(ಉಪೇಕ್ಷೆ) ಆ ಮೋರೆಯಲ್ಲಿ!(ಮುಖದಲ್ಲಿ) ಆನೆಯಂತೆ

ಅರೆ ಮುಚ್ಚಿದ ಕಣ್ಣಲ್ಲಿ "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನ್ನುವಂಥ ಭಾವನೆ, ಉಪದೇಶಿಸಲು ಬಂದ ಗುರುಗಳಿಗೂ ಇದು ಒಂದು ವ್ಯಾಧಿ. ಇಂಥವರಿಗೆ ಪಾಠ ಹೇಳುವ ದೌರ್ಭಾಗ್ಯ ತಮಗೇಕೆ ಬಂತು ಎಂದು ಅವರು ನೊಂದುಕೊಳ್ಳುತ್ತಾರೆ.

**ರಾಜರ ಪ್ರಕೃತಿ**

ರಾಜರ ಪ್ರಕೃತಿಯೇ ಹಾಗೆ. ಅಹಂಕಾರದ ದಾಹಜ್ವರ ತಲೆಗೆ ಅಡರಿ ಅವರ ಮನದಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ(ತಿಕ್ಕಲು) ಅಡರಿದವರಿಗೆ(ಹತ್ತಿದವರಿಗೆ) ಜಗತ್ತೆಲ್ಲ ಕ್ಷುದ್ರ(ಕೀಳಾಗಿ)ವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ.

**ಸಂಪತ್ತಿನ(ಲಕ್ಷ್ಮಿ)ನೆಲೆ**

ಕುಮಾರ, ನೀನು ಮಂಗಲವನ್ನೇ ಬಯಸುವವನು ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಮೊದಲು ಈ ಸಂಪತ್ತಿನ ನೆಲೆಯನ್ನೆ ಒಂದಿಷ್ಟು ವಿಚಾರಿಸಿ ನೋಡು: ಲಕ್ಷ್ಮಿಯೆಂಬ ಚಂಚಲೆ ಹಾಲುಗಡಲಿನಿಂದ ಮೇಲೆದ್ದು ಬರುವಾಗಲೆ ತನ್ನ ಜತೆಗಾರರಿಂದ ಹಲವೆಲ್ಲ ದುರ್ಗುಣಗಳನ್ನು ಹೊತ್ತುಕೊಂಡೆ ಬಂದಿದ್ದಾಳೆ. **ಚಂದ್ರಕಲೆಯ ವಕ್ರತೆ, ಉಚ್ಚೈಃಶ್ರವಸ್ಸಿನ ಚಾಪಲ್ಯ, ಕಾಲಕೂಟದ ಮೋಹಕತ್ವ, ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ ಈ ಎಲ್ಲ ಗುಣಗಳು ಸಂಪತ್ತಿನ ಸಹಚಾರಿಗಳು.** ಈ ಹಣದಷ್ಟು ಕೆಟ್ಟ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ. ಏಕೆಂದರೆ ಅದಕ್ಕೆ ಯಾರ ಗುರುತೂ ಇಲ್ಲ.

| | | |
|---|---|---|
| **ಚಂದ್ರಕಲೆಯ ವಕ್ರತೆ** | : | ಬೆಳುದಿಂಗಳಿನ ಕೊಂಕು ಸ್ವಭಾವ. |
| **ಉಚ್ಚೈಃಶ್ರವಸ್ಸಿನ ಚಾಪಲ್ಯ** | : | ಇಂದ್ರನ ಕುದುರೆಯ ಚಂಚಲತೆಯ ಸ್ವಭಾವ. |
| **ಮದ್ಯದ ಮಾದಕತ್ವ** | : | ಹೆಂಡದಂತೆ ಅಮಲೇರಿಸುವ ಸ್ವಭಾವ. |
| **ಕೌಸ್ತುಭ ಕಾಠೀಣ್ಯ** | : | ವಿಷ್ಣುವಿನ ಎದೆಯನ್ನು ಅಲಂಕರಿಸಿರುವ ರತ್ನದಂತೆ ಕಠಿಣತೆ. |
| **ಕಾಲಕೂಟದ ಮೋಹಕತ್ವ** | : | ಸಮುದ್ರಮಥನದಲ್ಲಿ ಹುಟ್ಟಿದ ಒಂದು ಉಗ್ರವಾದ ವಿಷದಂತೆ ಮರುಳುಗೊಳಿಸುವ ರೀತಿ. |

**ಸಂಪತ್ತಿನ ಚಾಂಚಲ್ಯತೆ**

ಸಂಪತ್ತು ಸಿಕ್ಕಿತು ಎಂದ ಮಾತ್ರಕ್ಕೆಯೆ ಸುಖವುಂಟೆ? ಅದನ್ನು ಕಾಯುವ ಕಷ್ಟ, ಕಾಪಾಡುವ ಪಾಡು ಯಾರಿಗೆ ಬೇಕು? ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾವಲಿಟ್ಟ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ!

**ಸಂಪತ್ತಿನ ಸ್ವಭಾವ**

ಸಂಪತ್ತಿಗೆ ಸ್ನೇಹದ ಬಂಧನವಿಲ್ಲ; ಕುಲದ ಗುರುತಿಲ್ಲ; ರೂಪದ ಒಲವಿಲ್ಲ. ಒಂದೇ ಮನೆತನದಲ್ಲಿ ಬಹುಕಾಲ ಉಳಿಯುವ ಅಭ್ಯಾಸವಂತು ಇಲ್ಲವೇ ಇಲ್ಲ. ಅದು ಸ್ವಭಾವವನ್ನು ಕಾಣದು; ಪಾಂಡಿತ್ಯವನ್ನು ಗಣಿಸದು(ಲೆಕ್ಕಿಸದು); ಶಾಸ್ತ್ರವನ್ನು ಆಲಿಸದು; ಧರ್ಮವನ್ನು ನಂಬದು. ಅದಕ್ಕೆ ತ್ಯಾಗದ ಮೇಲೆ ಗೌರವವಿಲ್ಲ; ತುಂಬ ಬಲ್ಲವರು ಎಂದರೆ ಆದರ(ಗೌರವ)ವಿಲ್ಲ; ಒಳ್ಳೆಯ ನಡತೆ ಅದಕ್ಕೆ ಅಪರಿಚಿತ. ಅದರ ಮುಂದೆ ಸತ್ಯಕ್ಕು ಸುಳ್ಳಿನಷ್ಟೆ ಬೆಲೆ. ಅದು ಒಳ್ಳೆಯ ಲಕ್ಷಣವಂತನನ್ನೆ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಅದರ ಚಾಪಲ್ಯಕ್ಕಂತು ಎಣೆಯೆ ಇಲ್ಲ. ಅದು ಗಂಧರ್ವನಗರದಂತೆ, ಕಾಣುತ್ತಿದ್ದಂತೆಯೆ ಕರಗಿಬಿಡುತ್ತದೆ!

**ದುಡ್ಡಿನ ಇತಿಹಾಸ**

ದುಡ್ಡು ಒಂದು ಕೆಟ್ಟ ಪಿಶಾಚಿ. ಅದು ಕೆಲವರನ್ನು ದೊಡ್ಡಸ್ತಿಕೆಯಲ್ಲಿ ಕುಣಿಸಿಬಿಡುತ್ತದೆ. ಕೆಲವು ಕ್ಷುದ್ರ ಜೀವಿಗಳನ್ನಂತು ಈ ಪಿಶಾಚಿ ಹುಚ್ಚುಗೊಳಿಸಿಬಿಡುತ್ತದೆ. ವಿದ್ಯಾವಂತನನ್ನು ಕಂಡರೆ ಅದಕ್ಕೆ ಕಿಚ್ಚು. ಅವನ ಗೋಜಿಗೇ ಅದು ಬರುವುದಿಲ್ಲ. ಗುಣವಂತನನ್ನು ಕಂಡಾಗ ಕೊಳಕನನ್ನು ಕಂಡರೆ ಹೇಗೆ ಹಾಗೆ ದೂರ ಸರಿಯುತ್ತದೆ. ವೀರರನ್ನು ಕಂಡಾಗ ಅಮಂಗಲವನ್ನು ಕಂಡಂತೆ, ಸಜ್ಜನರನ್ನು ಕಂಡರೆ ಅಪಶಕುನವನ್ನು ಕಂಡಂತೆ ನಡೆದುಕೊಳ್ಳುತ್ತದೆ. ಕುಲೀನ(ಶ್ರೇಷ್ಠಕುಲದವ)ನನ್ನು ಕಂಡರೆ ಹಾವು ಸುಳಿದಂತೆ ಹಿಂಜರಿಯುತ್ತದೆ. ಶೂರರೆಂದರೆ ಮುಳ್ಳಿನಂತೆ, ದಾನಶೀಲರೆಂದರೆ ಕೆಟ್ಟ ಕನಸಿನಂತೆ ಅದಕ್ಕೆ ತ್ಯಾಜ್ಯ. ವಿನಯಶೀಲನನ್ನು, ಪಂಡಿತನನ್ನು ಕಂಡರೆ ಪಾತಕಿಯನ್ನು, ಮರುಳನನ್ನು ಕಂಡಂತೆ ನಡೆದುಕೊಳ್ಳುತ್ತದೆ. ದುಡ್ಡಿನ ಇತಿಹಾಸವೆ ಅಂಥದು.

ದುಡ್ಡಿನ ಬಿಸಿ ಬಗೆಯಲ್ಲಿ ಜಾಡ್ಯವನ್ನು ತುಂಬುತ್ತದೆ. ದೊಡ್ಡಸ್ತಿಕೆಯ ಜತೆಗೆಯೆ ಕೀಳುಮಟ್ಟದ ಅಭಿರುಚಿಯನ್ನು ಬೆಳೆಸುತ್ತದೆ. ಸಂಪತ್ತು ಬೆಳೆದಷ್ಟು ದುಡ್ಡಿನ ಹಸಿವೂ ಹೆಚ್ಚುತ್ತದೆ. ಐಶ್ವರ್ಯ ಬೆಳೆದಂತೆಯೆ ದುರ್ಗುಣಗಳೂ ಬೆಳೆಯುತ್ತಿರುತ್ತವೆ. ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ, ಸಣ್ಣತನ ಇನ್ನೊಂದೆಡೆ ಇರಲಾರದು.

ಸಂಪತ್ತು ಸುಧೆ(ಅಮೃತ)ಯ ಜತೆಗೆ ಕಡಲಿನಿಂದ ಹುಟ್ಟಿ ಬಂತಂತೆ. ಆದರೆ ಸ್ವಭಾವದಲ್ಲಿ ಎಂಥ ಅಂತರ! ಅಮೃತ ಸತ್ತವರನ್ನು ಬದುಕಿಸಿದರೆ ಸಂಪತ್ತು ಸೇರಿದಲ್ಲಿ ಮನುಷ್ಯತ್ವವನ್ನೆ ಕೊಲ್ಲುತ್ತದೆ. ಅದಕ್ಕಾಗಿ ಜನ ಹೊಡೆದಾಡಿಕೊಂಡು ಸಾಯುತ್ತಾರೆ. ಆದರೆ ಅದು ಯಾರ ಕಣ್ಣಿಗೂ ಕಾಣಿಸದೆ ಮೋಜು ನೋಡುತ್ತಿರುತ್ತದೆ. ಹರಿಯ ಎದೆಯಲ್ಲಿ ಸಿರಿಯ ವಾಸ ಎನ್ನುತ್ತಾರೆ. ಆದರೆ ಮೂರ್ಖರ ಎದೆಯಲ್ಲಿ ಅದರ ವಾಸ ಎನ್ನುವುದು ನಮಗೆ ತಿಳಿದ ಮಾತು. ಎಂಥ ತಿಳಿಯಾದ ಮನಸ್ಸಾದರೂ ಸರಿಯೆ; ದುಡ್ಡಿನ ಕಿಲುಬು(ವಿಷ) ತಾಕಿತೆಂದರೆ ಮುಗಿಯಿತು – ಕದಡಿ ಕಲುಷವಾಗಿಬಿಡುತ್ತದೆ.

**ದುಡ್ಡಿನ ನಿಜರೂಪ**

ದುಡ್ಡಿನ ನಿಜರೂಪ ಎಂಥದು ಗೊತ್ತೆ? ಇದು ಆಸೆಯ ವಿಷಲತೆಗೆ ಎರೆಯುವ ನೀರು. ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆಯೆಂಬ ಚಿತ್ರಕ್ಕೆ ಬಳಿದ ಮಸಿ. ಅವಿವೇಕದ ಸವಿನಿದ್ದೆಗೆ ಹಾಸಿದ ಮೆತ್ತನೆಯ ಹಾಸಿಗೆ, ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟ. ಶಾಸ್ತ್ರದ ತಿಳಿವಿಗೆ ಬಿಗಿದ ಕಣ್ಪಟ್ಟಿ. ಎಲ್ಲ ದೌರ್ಜನ್ಯಗಳ ವಿಜಯಧ್ವಜ. ಕೋಪವೆಂಬ ಮೊಸಳೆಯನ್ನು ಹೊತ್ತ ಹೊಳೆ. ವಿಷಯ ಮದ್ಯಗಳ ಪಾನಭೂಮಿ. ಸಜ್ಜನಿಕೆಗೆ ಬೀಸಿದ ಬೆತ್ತ. ಒಳ್ಳೆಯತನವೆಂಬ ಕಲಹಂಸಗಳನ್ನು ಓಡಿಸುವ ಬಿರುಮಳೆ. ಸಜ್ಜನಿಕೆಯನ್ನು ಸುಡುವ ಮಸಣ. ಧರ್ಮವೆಂಬ ಚಂದ್ರಮಂಡಲವನ್ನು ಕಬಳಿಸುವ ರಾಹುವಿನ ಕರಿನಾಲಿಗೆ.

**ಸಿರಿ ಮದವೇರಿದ ಅರಸರ ಸ್ವಭಾವ**

ಈ ಸಿರಿಯನ್ನು ಕಂಡು ಮರುಳಾಗದವರನ್ನು ನಾನು ಕಂಡಿಲ್ಲ. ಎಲ್ಲರೂ ಸಿರಿಗೆ ಆಕರ್ಷಿತರಾದವರೆ. ಎಲ್ಲರೂ ಸಿರಿಯಿಂದ ಮೋಸಹೋಗುವವರೆ. ಯಾವನೇ ಒಬ್ಬನನ್ನು ನಿರ್ವಂಚನೆಯಿಂದ ಪ್ರೇಮಿಸುವುದು ಸಿರಿಯ ಜಾಯಮಾನಕ್ಕೇ ಸಲ್ಲದು. ಕೆಟ್ಟ ನಡತೆಯ ಇಂಥ ಸಿರಿಯು ಹೇಗೊ ದೈವಯೋಗದಿಂದ ಕೆಲ ಮಂದಿ ರಾಜರಿಗೆ ಒಲಿಯುತ್ತದೆ. ಅಲ್ಲಿಗೆ ಮುಗಿಯಿತು ಅವರ ಕತೆ. ಏನು ಸಂಭ್ರಮ, ಏನು ಕೋಲಾಹಲ! ಜಗತ್ತಿನ ಎಲ್ಲ ದೌರ್ಜನ್ಯಗಳಿಗೆ ಅವರು ಆಸರೆ. ಪಟ್ಟಾಭಿಷೇಕ ಕಾಲದಲ್ಲಿ ಅವರ ತಲೆಗೆ ಮಂಗಲಜಲವನ್ನು ಬಿಂದಿಗೆಯಿಂದ ಸುರಿಯುತ್ತಾರೆ. ಈ ಸಲಿಲವೆ ಅವರ ದಯೆ–ದಾಕ್ಷಿಣ್ಯಗಳನ್ನೆಲ್ಲ ತೊಳೆದುಬಿಡುತ್ತದೆ. ಹೋಮದ ಹೊಗೆಯಿಂದ ಬಗೆಯೆಲ್ಲ ಮಲಿನವಾಗುತ್ತದೆ. ಪುರೋಹಿತರು ಮಂತ್ರಜಲವನ್ನು ಸಿಂಪಡಿಸುವ ದರ್ಭೆಯ ಚಿಗುರು ಅವರ ಕ್ಷಮಾಗುಣವನ್ನು ಒರೆಸಿಬಿಡುತ್ತದೆ. ತಲೆಗೆ ಬಿಗಿದ ಪಾವುಡದ(ಪೇಟದ) ಎಡೆಯಲ್ಲಿ ಮುಪ್ಪಿನ ನೆನಪು ಮರೆಯಾಗುತ್ತದೆ. ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣಿಸುವುದಿಲ್ಲ. ದಿಟವನ್ನೆ ನುಡಿಯುವ ಬುದ್ಧಿ ಚಾಮರದ ಗಾಳಿಯಲ್ಲಿ ತೇಲಿಹೋಗುತ್ತದೆ. ಕಂಚುಕಿ(ಅಂತಃಪುರದ ಅಧಿಕಾರಿ)ಗಳ ಕೈಯ ಬೆತ್ತವನ್ನು ಕಂಡೇ ಸಜ್ಜನಿಕೆ ದೂರ ಸರಿಯುತ್ತದೆ. ಹೊಗಳುಭಟ್ಟರ ಜಯಕಾರದ ಕೋಲಾಹಲದಲ್ಲಿ ನಲ್ನುಡಿ ಕೇಳುವ ಕಿವಿ ಕಿವುಡಾಗುತ್ತದೆ. ತೊನೆಯುವ ವಿಜಯಧ್ವಜವೆ ಯಶಸ್ಸನ್ನು ನಾಶಗೊಳಿಸುತ್ತದೆ. ಹೀಗಿದೆ ಐಶ್ವರ್ಯದ ಅಟಾಟೋಪ!

## ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?**

**ಉತ್ತರ:** ಹಿತವಚನವು ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ಮನಸ್ಸಿನ ಕೊಳೆಯನ್ನೆಲ್ಲ ತೊಳೆಯುತ್ತದೆ.

**2. ಯಾರ ಕಿವಿಗೆ ಉಪದೇಶ ನಾಟುವುದಿಲ್ಲ?**

**ಉತ್ತರ:** ರಾಜರ ಮನೆತನದಲ್ಲಿ ಹುಟ್ಟಿದವರ ಕಿವಿಗೆ ಉಪದೇಶ ನಾಟುವುದಿಲ್ಲ.

**3. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?**

**ಉತ್ತರ:** ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ.

**4. ಲಕ್ಷ್ಮಿ ಯಾವ ಯಾವ ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ?**

**ಉತ್ತರ:** ಲಕ್ಷ್ಮಿ ಚಂದ್ರಕಲೆಯ ವಕ್ರತೆ, ಉಚ್ಚೈಃಶ್ರವಸ್ಸಿನ ಚಾಪಲ್ಯ, ಕಾಲಕೂಟದ ಮೋಹಕತ್ವ, ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ.

**5. ಸಂಪತ್ತಿನ ಗುಣವೇನು?**

**ಉತ್ತರ:** ಗಂಧರ್ವ ನಗರದಂತೆ ಕರಗಿಬಿಡುವುದು ಸಂಪತ್ತಿನ ಗುಣವಾಗಿದೆ.

**6. ಯಾರ್‍ಯಾರನ್ನು ಕಂಡರೆ ಸಂಪತ್ತಿಗೆ ಆಗಿಬರುವುದಿಲ್ಲ?**

**ಉತ್ತರ:** ವಿದ್ಯಾವಂತರು, ಗುಣವಂತರು, ವೀರರು, ಸಜ್ಜನರು ಕುಲೀನರು, ಶೂರರು, ದಾನಶೀಲರು, ವಿನಯಶೀಲರು, ಪಂಡಿತರನ್ನು ಕಂಡರೆ ಸಂಪತ್ತಿಗೆ ಆಗಿಬರುವುದಿಲ್ಲ.

**7. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?**

**ಉತ್ತರ:** ದರ್ಭೆಯ ಚಿಗುರು ರಾಜರ ಕ್ಷಮಾಗುಣವನ್ನು ಒರೆಸಿಬಿಡುತ್ತದೆ.

**8. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?**

**ಉತ್ತರ:** ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣುವುದಿಲ್ಲ.

## ಹೆಚ್ಚುವರಿ ಪ್ರಶ್ನೋತ್ತರಗಳು

**9. ಗುರುವಚನ ಯಾರ ಕಿವಿಗೆ ಆಭರಣವಾಗುತ್ತದೆ?**
**ಉತ್ತರ:** ಗುರುವಚನ ಸಜ್ಜನರ ಕಿವಿಗೆ ಆಭರಣವಾಗುತ್ತದೆ?

**10. ಯಾರ ಬುದ್ಧಿ ಮಂಕಾಗುತ್ತದೆ?**
**ಉತ್ತರ:** ಅಧಿಕಾರದ ಸೋಂಕು ತಾಗಿದವರ ಬುದ್ಧಿ ಮಂಕಾಗುತ್ತದೆ.

**11. ಸಂಪತ್ತು ಏನನ್ನು ಕೊಲ್ಲುತ್ತದೆ?**
**ಉತ್ತರ:** ಸಂಪತ್ತು ಮನುಷ್ಯತ್ವವನ್ನು ಕೊಲ್ಲುತ್ತದೆ.

**12. ಸಿರಿಯ ಜಾಯಮಾನಕ್ಕೆ ಯಾವುದು ಸಲ್ಲದು?**
**ಉತ್ತರ:** ಒಬ್ಬನನ್ನು ನಿರ್ವಂಚನೆಯಿಂದ ಪ್ರೇಮಿಸುವುದು ಸಿರಿಯ ಜಾಯಮಾನಕ್ಕೆ ಸಲ್ಲದು.

**13. ಕಾಶ್ಮೀರದ ಮಹಾರಾಜ ತಾರಾಪೀಡನ ಮಹಾಮಂತ್ರಿ ಯಾರು ?**
ಉತ್ತರ: ಕಾಶ್ಮೀರದ ಮಹಾರಾಜ ತಾರಾಪೀಡನ ಮಹಾಮಂತ್ರಿ ಶುಕನಾಸ.

ಜ್ಞಾನದೀಪ ... –ಸಂಗ್ರಹ–ಹಂಚಿಕೆ

**14. ಶುಕನಾಸನು ಯಾರಿಗೆ ಉಪದೇಶ ನೀಡುತ್ತಾನೆ?**
ಉತ್ತರ : ಶುಕನಾಸನು ರಾಜಪುತ್ರ ಚಂದ್ರಪೀಡನಿಗೆ ಉಪದೇಶ ನೀಡುತ್ತಾನೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.**

**ಉತ್ತರ:** ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'(ಸ್ನಾನ). ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ.

**2. ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ? ಯಾಕೆ ?**

**ಉತ್ತರ:** ಮೂರ್ಖರು ಮತ್ತು ರಾಜಮನೆತನದಲ್ಲಿ ಹುಟ್ಟಿದವರಿಗೆ ಗುರೂಪದೇಶವು ಮೆಚ್ಚಿಕೆಯಾಗುವುದಿಲ್ಲ. ಏಕೆಂದರೆ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನ್ನುವಂಥ ಭಾವ ಹೊಂದಿರುವುದರಿಂದ ಗುರೂಪದೇಶವು ಇವರಿಗೆ ಮೆಚ್ಚಿಕೆಯಾಗುವುದಿಲ್ಲ.

**3. ರಾಜರ ಪ್ರಕೃತಿ ಹೇಗಿರುತ್ತದೆ?**

**ಉತ್ತರ:** ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ಅಧಿಕಾರದ ಸೋಂಕು ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ ಎನ್ನುವಂಥ ಭಾವ ಹೊಂದಿರುತ್ತಾರೆ. ಹೀಗೆ ರಾಜರ ಪ್ರಕೃತಿ ಇರುತ್ತದೆ.

**4. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?**

**ಉತ್ತರ:** ಸಂಪತ್ತನ್ನು ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ! ಒಂದೇ ಮನೆತನದಲ್ಲಿ ಬಹುಕಾಲ ಉಳಿಯುವ ಅಭ್ಯಾಸವಂತು ಇಲ್ಲವೇ ಇಲ್ಲ. ಅದರ ಚಾಪಲ್ಯಕ್ಕಂತು ಎಣೆಯೆ ಇಲ್ಲ. ಅದು ಗಂಧರ್ವನಗರದಂತೆ, ಕಾಣುತ್ತಿದ್ದಂತೆಯೆ ಕರಗಿಬಿಡುತ್ತದೆ! ಆದ್ದರಿಂದ ಸಂಪತ್ತನ್ನು ಕಾಪಾಡುವುದು ಕಷ್ಟವಾಗುತ್ತದೆ.

**5. ಸಂಪತ್ತು ಯಾರನ್ನು ಆಶ್ರಯಿಸುತ್ತದೆ?**

**ಉತ್ತರ:** ಸಂಪತ್ತು ಒಳ್ಳೆಯ ಲಕ್ಷಣವಂತನನ್ನೆ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಆದರೆ ಅದರ ಚಾಪಲ್ಯಕ್ಕಂತು ಎಣೆಯೆ ಇಲ್ಲ. ಹರಿಯ ಎದೆಯಲ್ಲಿ ಸಿರಿಯ ವಾಸ ಎನ್ನುತ್ತಾರೆ. ಆದರೆ ಮೂರ್ಖರ ಎದೆಯಲ್ಲಿ ಅದರ ವಾಸ ಎನ್ನುವುದು ನಮಗೆ ತಿಳಿದ ಮಾತು.

**6. ದುಡ್ಡಿನ ನಿಜರೂಪವೇನು?**

**ಉತ್ತರ:** ದುಡ್ಡಿನ ನಿಜರೂಪ ನೋಡುವುದಾದರೆ, ಇದು ಆಸೆಯ ವಿಷಲತೆಗೆ ಎರೆಯುವ ನೀರು. ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆಯೆಂಬ ಚಿತ್ರಕ್ಕೆ ಬಳಿದ ಮಸಿ. ಅವಿವೇಕದ ಸವಿನಿದ್ದೆಗೆ ಹಾಸಿದ ಮೆಲುಹಾಸೆ. ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟ. ಶಾಸ್ತ್ರದ ತಿಳಿವಿಗೆ ಬಿಗಿದ ಕಣ್ಕಟ್ಟ. ಎಲ್ಲ ದೌರ್ಜನ್ಯಗಳ ವಿಜಯಧ್ವಜ. ಕೋಪವೆಂಬ ಮೊಸಳೆಯನ್ನು ಹೊತ್ತ ಹೊಳೆ. ವಿಷಯ ಮದ್ಯಗಳ ಪಾನಭೂಮಿ. ಸಜ್ಜನಿಕೆಗೆ ಬೀಸಿದ ಬೆತ್ತ. ಒಳ್ಳೆಯತನವೆಂಬ ಕಲಹಂಸಗಳನ್ನು ಓಡಿಸುವ ಬಿರುಮಳೆ. ಸಜ್ಜನಿಕೆಯನ್ನು ಸುಡುವ ಮಸಣ. ಧರ್ಮವೆಂಬ ಚಂದ್ರಮಂಡಲವನ್ನು ಕಬಳಿಸುವ ರಾಹುವಿನ ಕರಿನಾಲಿಗೆ ಆಗಿದೆ.

**7. ಸಿರಿಯು ರಾಜರಿಗೆ ಒಲಿದರೆ ಏನೇನು ಅನಾಹುತಗಳಾಗುತ್ತವೆ?**

**ಉತ್ತರ:** ಸಿರಿಯು ರಾಜರಿಗೆ ಒಲಿದರೆ, ಅಲ್ಲಿಗೆ ಮುಗಿಯಿತು ಅವರ ಕತೆ. ಏನು ಸಂಭ್ರಮ, ಏನು ಕೋಲಾಹಲ! ಜಗತ್ತಿನ ಎಲ್ಲ ದೌರ್ಜನ್ಯಗಳಿಗೆ ಅವರು ಆಸರೆಯಾಗುತ್ತಾರೆ. ಅವರಲ್ಲಿ ದಯೆ-ದಾಕ್ಷಿಣ್ಯಗಳೆಲ್ಲ ದೂರವಾಗಿಬಿಡುತ್ತವೆ. ಬಗೆಯೆಲ್ಲ ಮಲಿನವಾಗುತ್ತದೆ. ಕ್ಷಮಾಗುಣವನ್ನು ಒರೆಸಿಬಿಡುತ್ತದೆ. ಮುಪ್ಪಿನ ನೆನಪು ಮರೆಯಾಗುತ್ತದೆ. ಪರಲೋಕ ಕಾಣಿಸುವುದಿಲ್ಲ. ದಿಟವನ್ನೆ ನುಡಿಯುವ ಬುದ್ಧಿ ಗಾಳಿಯಲ್ಲಿ ತೇಲಿಹೋಗುತ್ತದೆ. ಸಜ್ಜನಿಕೆ ದೂರ ಸರಿಯುತ್ತದೆ. ನಲ್ನುಡಿ ಕೇಳುವ ಕಿವಿ ಕಿವುಡಾಗುತ್ತದೆ. ಯಶಸ್ಸನ್ನು ನಾಶಗೊಳಿಸುತ್ತದೆ. ಹೀಗೆ ಅನೇಕ ಅನಾಹುತಗಳಾಗುತ್ತವೆ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**1. ಗುರೂಪದೇಶವನ್ನು ಯಾರ್ಯಾರು ಹೇಗೆ ಸ್ವೀಕರಿಸುತ್ತಾರೆ.**

**ಉತ್ತರ:** ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ' ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ. ಇಂತಹ ಗುರುವಾಣಿ ಎಷ್ಟು ಪರಿಶುದ್ಧವಾದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ಆದರೆ ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು

ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ. ಆಗ ಬಾಳಿನಲ್ಲಿ ಒಂದು ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ.

ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ಯಾರದೋ ದಾಕ್ಷಿಣ್ಯಕ್ಕೆ ಉಪದೇಶವನ್ನು ಆಲಿಸಿದರೂ ಎಂಥ ಅನಾದರ ಆ ಮೋರೆಯಲ್ಲಿ! ಆನೆಯಂತೆ ಅರೆ ಮುಚ್ಚಿದ ಕಣ್ಣಲ್ಲಿ "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನ್ನುವಂಥ ಭಾವ ಅವರಲ್ಲಿರುತ್ತದೆ.

**2. ಸಂಪತ್ತಿನ ಗುಣಾವಗುಣಗಳನ್ನು ವಿವರಿಸಿ.**

**ಉತ್ತರ:** ಚಂದ್ರಕಲೆಯ ವಕ್ರತೆ, ಉಚ್ಚೈಃಶ್ರವಸ್ಸಿನ ಚಾಪಲ್ಯ, ಕಾಲಕೂಟದ ಮೋಹಕತ್ವ, ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ ಈ ಎಲ್ಲ ದುರ್ಗುಣಗಳು ಸಂಪತ್ತಿನ ಸಹಚಾರಿಗಳು. ಈ ಹಣದಷ್ಟು ಕೆಟ್ಟ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ. ಏಕೆಂದರೆ ಅದಕ್ಕೆ ಯಾರ ಗುರುತೂ ಇಲ್ಲ. ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ! ಸಂಪತ್ತಿಗೆ ಸ್ನೇಹದ ಬಂಧನವಿಲ್ಲ; ಕುಲದ ಗುರುತಿಲ್ಲ; ರೂಪದ ಒಲವಿಲ್ಲ. ಒಂದೇ ಮನೆತನದಲ್ಲಿ ಬಹುಕಾಲ ಉಳಿಯುವ ಅಭ್ಯಾಸವಂತು ಇಲ್ಲವೇ ಇಲ್ಲ. ಅದು ಸ್ವಭಾವವನ್ನು ಕಾಣದು; ಪಾಂಡಿತ್ಯವನ್ನು ಗಣಿಸದು; ಶಾಸ್ತ್ರವನ್ನು ಆಲಿಸದು; ಧರ್ಮವನ್ನು ನಂಬದು. ಅದಕ್ಕೆ ತ್ಯಾಗದ ಮೇಲೆ ಗೌರವವಿಲ್ಲ; ತುಂಬ ಬಲ್ಲವರು ಎಂದರೆ ಆದರವಿಲ್ಲ; ಒಳ್ಳೆಯ ನಡತೆ ಅದಕ್ಕೆ ಅಪರಿಚಿತ. ಅದರ ಮುಂದೆ ಸತ್ಯಕ್ಕು ಸುಳ್ಳಿನಷ್ಟೆ ಬೆಲೆ. ಅದು ಒಳ್ಳೆಯ ಲಕ್ಷಣವಂತನನ್ನೆ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಅದರ ಚಾಪಲ್ಯಕ್ಕಂತು ಎಣೆಯೆ ಇಲ್ಲ. ಅದು ಗಂಧರ್ವನಗರದಂತೆ, ಕಾಣುತ್ತಿದ್ದಂತೆಯೆ ಕರಗಿಬಿಡುತ್ತದೆ!

ಇದು ಒಂದು ಕೆಟ್ಟ ಪಿಶಾಚಿ. ಅದು ಕೆಲವರನ್ನು ದೊಡ್ಡಸ್ತಿಕೆಯಲ್ಲಿ ಕುಣಿಸಿಬಿಡುತ್ತದೆ. ಕೆಲವು ಕ್ಷುದ್ರ ಜೀವಿಗಳನ್ನಂತು ಈ ಪಿಶಾಚಿ ಹುಚ್ಚುಗೊಳಿಸಿಬಿಡುತ್ತದೆ. ವಿದ್ಯಾವಂತನನ್ನು ಕಂಡರೆ ಅದಕ್ಕೆ ಕಿಚ್ಚು. ಅವನ ಗೋಜಿಗೇ ಅದು ಬರುವುದಿಲ್ಲ. ಗುಣವಂತನನ್ನು ಕಂಡಾಗ ಕೊಳಕನನ್ನು ಕಂಡರೆ ಹೇಗೆ ಹಾಗೆ ದೂರ ಸರಿಯುತ್ತದೆ. ವೀರರನ್ನು ಕಂಡಾಗ ಅಮಂಗಲವನ್ನು ಕಂಡಂತೆ, ಸಜ್ಜನರನ್ನು ಕಂಡರೆ ಅಪಶಕುನವನ್ನು ಕಂಡಂತೆ ನಡೆದುಕೊಳ್ಳುತ್ತದೆ. ಕುಲೀನನನ್ನು ಕಂಡರೆ ಹಾವು ಸುಳಿದಂತೆ ಹಿಂಜರಿಯುತ್ತದೆ. ಶೂರರೆಂದರೆ ಮುಳ್ಳಿನಂತೆ, ದಾನಶೀಲರೆಂದರೆ ಕೆಟ್ಟ ಕನಸಿನಂತೆ ಅದಕ್ಕೆ ತ್ಯಾಜ್ಯ. ವಿನಯಶೀಲನನ್ನು, ಪಂಡಿತನನ್ನು ಕಂಡರೆ ಪಾತಕಿಯನ್ನು, ಮರುಳನನ್ನು ಕಂಡಂತೆ ನಡೆದುಕೊಳ್ಳುತ್ತದೆ. ಬಗೆಯಲ್ಲಿ ಜಾಡ್ಯವನ್ನು ತುಂಬುತ್ತದೆ. ದೊಡ್ಡಸ್ತಿಕೆಯ ಜತೆಗೆಯೆ ಕೀಳುಮಟ್ಟದ ಅಭಿರುಚಿಯನ್ನು ಬೆಳೆಸುತ್ತದೆ. ಮನುಷ್ಯತ್ವವನ್ನೆ ಕೊಲ್ಲುತ್ತದೆ. ಅದು ಯಾರ ಕಣ್ಣಿಗೂ ಕಾಣಿಸದೆ ಮೋಜು ನೋಡುತ್ತಿರುತ್ತದೆ. ಮೂರ್ಖರ ಎದೆಯಲ್ಲಿ ಅದರ ವಾಸ. ಎಂಥ ತಿಳಿಯಾದ ಬಗೆಯನ್ನು ಕದಡಿ ಕಲುಷವಾಗಿಬಿಡುತ್ತದೆ. ಹೀಗೆ ಸಂಪತ್ತು ಗುಣಾವಗುಣಗಳನ್ನು ಹೊಂದಿದೆ.

**3. ಸಂಪತ್ತಿನ ಮದವೇರಿದ ಅರಸರ ಸ್ವಭಾವ ಹೇಗಿರುತ್ತದೆ?**

**ಉತ್ತರ:** ದೈವಯೋಗದಿಂದ ಕೆಲ ಮಂದಿ ರಾಜರಿಗೆ ಸಂಪತ್ತು ಒಲಿಯುತ್ತದೆ. ಅಲ್ಲಿಗೆ ಮುಗಿಯಿತು ಅವರ ಕತೆ. ಏನು ಸಂಭ್ರಮ, ಏನು ಕೋಲಾಹಲ! ಜಗತ್ತಿನ ಎಲ್ಲ ದೌರ್ಜನ್ಯಗಳಿಗೆ ಅವರು ಆಸರೆ. ಪಟ್ಟಾಭಿಷೇಕ ಕಾಲದಲ್ಲಿ ಅವರ ತಲೆಗೆ ಮಂಗಲಜಲವನ್ನು ಬಿಂದಿಗೆಯಿಂದ ಸುರಿಯುತ್ತಾರೆ. ಈ ಸಲಿಲವೆ ಅವರ ದಯೆ–ದಾಕ್ಷಿಣ್ಯಗಳನ್ನೆಲ್ಲ ತೊಳೆದುಬಿಡುತ್ತದೆ. ಹೋಮದ ಹೊಗೆಯಿಂದ ಬಗೆಯೆಲ್ಲ ಮಲಿನವಾಗುತ್ತದೆ. ಪುರೋಹಿತರು ಮಂತ್ರಜಲವನ್ನು ಸಿಂಪಡಿಸುವ ದರ್ಭೆಯ ಚಿಗುರು ಅವರ ಕ್ಷಮಾಗುಣವನ್ನು ಒರೆಸಿಬಿಡುತ್ತದೆ. ತಲೆಗೆ ಬಿಗಿದ ಪಾವುಡದ ಎಡೆಯಲ್ಲಿ ಮುಪ್ಪಿನ ನೆನಪು ಮರೆಯಾಗುತ್ತದೆ. ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣಿಸುವುದಿಲ್ಲ. ದಿಟವನ್ನೆ ನುಡಿಯುವ ಬುದ್ಧಿ ಚಾಮರದ ಗಾಳಿಯಲ್ಲಿ ತೇಲಿಹೋಗುತ್ತದೆ. ಕಂಚುಕಿಗಳ ಕೈಯ ಬೆತ್ತವನ್ನು ಕಂಡೇ ಸಜ್ಜನಿಕೆ ದೂರ ಸರಿಯುತ್ತದೆ. ಹೊಗಳುಭಟರ ಜಯಕಾರದ ಕೋಲಾಹಲದಲ್ಲಿ ನಲ್ನುಡಿ ಕೇಳುವ ಕಿವಿ ಕಿವುಡಾಗುತ್ತದೆ. ತೊನೆಯುವ ವಿಜಯಧ್ವಜವೆ ಯಶಸ್ಸನ್ನು ನಾಶಗೊಳಿಸುತ್ತದೆ. ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ.

**ಈ) ಈ ಮಾತುಗಳ ಸಂದರ್ಭದೊಡನೆ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ.**

**1. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."**

**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'. ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ ಎಂದು ಉಪದೇಶ ನೀಡುವ ಸನ್ನಿವೇಶವಾಗಿದೆ.

**ಸ್ವಾರಸ್ಯ:–** ಈ ವಾಕ್ಯದಲ್ಲಿ ಗುರೂಪದೇಶ ಎಂದರೆ ತಲೆ ನೆರೆಯದೆ ಅಂದರೆ ವಯಸ್ಸಾಗದೇ ಬರುವ ಮುಪ್ಪು ಎಂದು ಗುರೂಪದೇಶದ ಮಹತ್ತ್ವವನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ಅರ್ಥೈಸಲಾಗಿದೆ.

**2. "ದುಡ್ಡು ದುರಭಿಮಾನದ ತವರು."**

**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ದುಡ್ಡಿನ ಮಹಿಮೆಯಿಂದ ರಾಜನಾದವನಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಈ ವಾಕ್ಯದಲ್ಲಿ ದುಡ್ಡು ಎಂತೆಂಥ ಅವಗಡಗಳನ್ನು ತೋರುತ್ತದೆ, ಅದು ಹೇಗೆ ದುರಭಿಮಾನದ ತವರಾಗುತ್ತದೆ ಎಂಬುದನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸಲಾಗಿದೆ.

**3. "ಸಂಪತ್ತು ಸಿಕ್ಕಿತು ಎಂದ ಮಾತ್ರಕ್ಕೆಯೆ ಸುಖವುಂಟೆ?"**

**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ಸಂಪತ್ತಿಗೆ ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟ ಸಂಪತ್ತು ಕೂಡ ತಾನೆ ಕಣ್ಮರೆಯಾಗಿಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ! ಎಂದು ರಾಜಕುಮಾರನಿಗೆ ಸಂಪತ್ತಿನ ಗುಣಾವಗುಣಗಳನ್ನು ತಿಳಿಸಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಸಂಪತ್ತಿನಿಂದ ಯಾವುದೇ ಸುಖವಿಲ್ಲ ಅದನ್ನು ಕಾಯುವುದು ಅಷ್ಟು ಸುಲಭದ ಕೆಲಸವಲ್ಲ, ಅದರಿಂದ ಸುಖವಿಲ್ಲ ಎಂದು ಹೇಳಿರುವುದು ಸ್ವಾರಸ್ಯಭರಿತವಾಗಿದೆ.

**4."ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ, ಸಣ್ಣತನ ಇನ್ನೊಂದೆಡೆ ಇರಲಾರದು."**

**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ದುಡ್ಡಿನ ಇತಿಹಾಸವನ್ನು ಹೇಳುತ್ತ, ದುಡ್ಡಿನ ಬಿಸಿ ಬಗೆಯಲ್ಲಿ ಜಾಡ್ಯವನ್ನು ತುಂಬುತ್ತದೆ. ದೊಡ್ಡಸ್ತಿಕೆಯ ಜತೆಗೆಯೆ ಕೀಳುಮಟ್ಟದ ಅಭಿರುಚಿಯನ್ನು ಬೆಳೆಸುತ್ತದೆ. ಸಂಪತ್ತು ಬೆಳೆದಷ್ಟು ದುಡ್ಡಿನ ಹಸಿವೂ ಹೆಚ್ಚುತ್ತದೆ. ಐಶ್ವರ್ಯ ಬೆಳೆದಂತೆಯೆ ದುರ್ಗುಣಗಳೂ ಬೆಳೆಯುತ್ತಿರುತ್ತವೆ. ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ, ಸಣ್ಣತನ ಇನ್ನೊಂದೆಡೆ ಇರಲಾರದು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ದುಡ್ಡೆ ದೊಡ್ಡಪ್ಪ ಎಂಬ ಅರ್ಥವಿದ್ದರೂ, ಆ ದುಡ್ಡು ಇದ್ದವರು ದೊಡ್ಡವರೆನಿಕೊಂಡರು ಅವರಲ್ಲಿ ಅದು ದೌರ್ಬಲ್ಯಗಳನ್ನು, ಸಂಕುಚಿತ ಭಾವನೆಗಳನ್ನು ತಂದುಕೊಡುತ್ತದೆ ಎಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

ಸತ್ಯಂ ಶಿವಂ ಸುಂದರಂ
ಜ್ಞಾನದೀಪ
ಸಂಗ್ರಹ-ಹಂಚಿಕೆ

**ಉ) ಈ ಕೆಳಗಿನ ಪದಗಳ ವಚನ ಬದಲಾಯಿಸಿ ಬರೆಯಿರಿ.**

**ಮಾದರಿ : ಕುಲೀನ – ಕುಲೀನರು**

ಕಿವಿಯೋಲೆ, ಕತ್ತಿಗಳು, ಹಾವು, ಬಿಂದಿಗೆಗಳು, ಹೊಗಳುಭಟ್ಟ, ನಲ್ನುಡಿ.

| | | |
|---|---|---|
| **ಕಿವಿಯೋಲೆ** – ಕಿವಿಯೋಲೆಗಳು | **ಕತ್ತಿಗಳು** – ಕತ್ತಿ | **ಹಾವು** – ಹಾವುಗಳು |
| **ಬಿಂದಿಗೆಗಳು** – ಬಿಂದಿಗೆ | **ಹೊಗಳುಭಟ್ಟ** – ಹೊಗಳುಭಟ್ಟರು | **ನಲ್ನುಡಿ** – ನಲ್ನುಡಿಗಳು |

**ಊ) ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.**

ಕೋಲಾಹಲ, ಹಿತವಚನ, ದಾಕ್ಷಿಣ್ಯ, ಅಪರಿಚಿತ, ದೊಡ್ಡಸ್ತಿಕೆ.

**ಕೋಲಾಹಲ** : ರಾಜರಲ್ಲಿ ಸಂಪತ್ತಿನ ಮಹಾದಾಸೆಯಿಂದ ಕೋಲಾಹಲ ಉಂಟಾಯಿತು.
**ಹಿತವಚನ** : ಯಾರಾದರೂ ಹಿತವಚನ ಹೇಳಿದಾಗ ಆಲಿಸುವುದು ಉತ್ತಮ.
**ದಾಕ್ಷಿಣ್ಯ** : ಇನ್ನೊಬ್ಬರ ಜೊತೆಗೆ ದಯೆ ದಾಕ್ಷಿಣ್ಯದಿಂದ ನಡೆದುಕೊಳ್ಳಬೇಕು.
**ಅಪರಿಚಿತ** : ಅಪರಿಚಿತರೊಂದಿಗೆ ಇರುವಾಗ ಎಚ್ಚರದಿಂದ ಇರುವುದು ಲೇಸು.
**ದೊಡ್ಡಸ್ತಿಕೆ** : ಎಲ್ಲ ನನಗೆ ತಿಳಿದಿದೆ ಎಂದು ದೊಡ್ಡಸ್ತಿಕೆ ತೋರಿಸಬಾರದು.

**ಋ) ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

ತಲೆಗಡರಿ, ಗುರೂಪದೇಶ, ಹಾಲುಗಡಲು, ಪಟ್ಟಾಭಿಷೇಕ.

**ತಲೆಗಡರಿ** : ತಲೆಗೆ + ಅಡರಿ = ಲೋಪಸಂಧಿ
**ಗುರೂಪದೇಶ** : ಗುರು + ಉಪದೇಶ = ಸವರ್ಣದೀರ್ಘ ಸಂಧಿ
**ಹಾಲುಗಡಲು** : ಹಾಲು + ಕಡಲು = ಆದೇಶ ಸಂಧಿ
**ಪಟ್ಟಾಭಿಷೇಕ** : ಪಟ್ಟ + ಅಭಿಷೇಕ = ಸವರ್ಣದೀರ್ಘ ಸಂಧಿ